OCTOBER 18, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

**ಮುಖ್ಯಾಂಶಗಳು:**

- **ಕೇಂದ್ರ ಪುರಸ್ಕೃತ ಜನಪರ ಯೋಜನೆಗಳ ಕಾಲಮಿತಿ ಅನುಷ್ಠಾನಕ್ಕೆ, ಆದ್ಯತೆ ನೀಡುವಂತೆ,** ಕೇಂದ್ರ ಹಣಕಾಸು ಖಾತೆ ಸಚಿವರ, ಸೂಚನೆ.
- **ಕೇಂದ್ರದ, ಆದಿ ಕರ್ಮಯೋಗಿ ಅಭಿಯಾನದಡಿ,** ಚಿತ್ರದುರ್ಗ ಜಿಲ್ಲೆಯ, 87 ಗ್ರಾಮಗಳು ಆಯ್ಕೆ.
- **ರಾಜ್ಯದ ಎಲ್ಲ ತಾಲೂಕು ಆಸ್ಪತ್ರೆಗಳಲ್ಲಿ, ದಿನದ** 24 ಗಂಟೆ ತ್ರಿವಳಿ ತಜ್ಞ ವೈದ್ಯರ ಲಭ್ಯತೆ ಖಾತ್ರಿಗೆ, ಆರೋಗ್ಯ ಇಲಾಖೆ ಯೋಜನೆ.
- **ಆಕಾಶವಾಣಿ ಧಾರವಾಡ** ಕೇಂದ್ರದಲ್ಲಿ, ಒಂದು ಸಾವಿರ ವಿಶಿಷ್ಟ ಸಸ್ಯಗಳ, ಮಿಯಾವಾಕಿ ಕಾನು ತೋಟ, ಉದ್ಘಾಟನೆ.

<><><>

**ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ ಹಾಗೂ** ಪ್ರಧಾನಮಂತ್ರಿ ಕಿರು ಆಹಾರ ಉತ್ಪಾದನಾ ಘಟಕಗಳ ನಿಯಮಬದ್ಧಗೊಳಿಸುವಿಕೆ– ಪಿ.ಎಂ.ಎಫ್.ಎಂ.ಇ, ಯೋಜನೆಗಳ ಅಡಿ, ಸ್ವೀಕೃತ ಅರ್ಜಿಗಳ ವಿಲೇವಾರಿ ಪ್ರಕ್ರಿಯೆಯ ವೇಗ ವರ್ಧಿಸುವಂತೆ, ಕೇಂದ್ರ ಹಣಕಾಸು ಖಾತೆ ಹಾಗೂ ಕಾರ್ಪೋರೇಟ್ ವ್ಯವಹಾರಗಳ ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್ ಸೂಚಿಸಿದ್ದಾರೆ. ಬಳ್ಳಾರಿಯಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಗತಿ ಪರಿಶೀಲಿಸಿ, ಮಾತನಾಡಿದ ಸಚಿವರು, ಕೇಂದ್ರ ಪುರಸ್ಕೃತ, ಜನಪರ, ಸಾಮಾಜಿಕ ಹಾಗೂ ಆರ್ಥಿಕ ಸುರಕ್ಷತೆ ಯೋಜನೆಗಳ ಅನುಷ್ಠಾನದಲ್ಲಿ, ಪಂಚಾಯಿತಿಗಳು ಹಾಗೂ ಜಿಲ್ಲಾ ಮಟ್ಟದ ಸಮಿತಿಗಳು, ಪ್ರಾಯೋಜಕ ಬ್ಯಾಂಕ್‌ಗಳು, ಪರಸ್ಪರ ಸಮನ್ವಯತೆಯಿಂದ, ಕಾಲಮಿತಿಯಲ್ಲಿ ಕೆಲಸ ಮಾಡುವಂತೆ, ನಿರ್ದೇಶಿಸಿದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ, ಗ್ರಾಮೀಣ ಬ್ಯಾಂಕ್ ತನ್ನ ಅಸ್ತಿತ್ವವನ್ನು ವಿಸ್ತರಿಸಿ, ಬ್ಯಾಂಕಿಂಗ್ ಸೇವಾ ಸೌಲಭ್ಯ ಒದಗಿಸುವಂತೆ, ನಿರ್ಮಲಾ ಸೀತಾರಾಮನ್ ಅಧಿಕಾರಿಗಳಿಗೆ ತಿಳಿಸಿದರು. ನಾಲ್ಕು ದಿನಗಳ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆ, ಯಶಸ್ವಿ ರಾಜ್ಯ ಪ್ರವಾಸ ಕೈಗೊಂಡು, ಕೇಂದ್ರ ಹಣಕಾಸು ಖಾತೆ ಸಚಿವರು, ಹೊಸ ದಿಲ್ಲಿ ತಲುಪಿದ್ದಾರೆ.

<><><>

**ವಿಜಯನಗರ ಜಿಲ್ಲೆ, ಹೊಸಪೇಟೆಯ,** ತುಂಗಭದ್ರಾ ಅಣೆಕಟ್ಟೆಯಲ್ಲಿ, 33 ಟಿ.ಎಂ.ಸಿ. ಅಡಿ ಹೂಳು ತೆಗೆಯಲು, ಕೇಂದ್ರ ನೀರಾವರಿ ಆಯೋಗ ತಜ್ಞರ ಜೊತೆ ಚರ್ಚಿಸಿ, ಶೀಘ್ರ ಕ್ರಮ ಕೈಗೊಳ್ಳುವುದಾಗಿ, ಕೇಂದ್ರ ಕಾರ್ಪೋರೇಟ್ ವ್ಯವಹಾರಗಳ ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್, ಭರವಸೆ ನೀಡಿದ್ದಾರೆ. ಹೊಸಪೇಟೆಯಲ್ಲಿ, ತುಂಗಭದ್ರಾ ರೈತ ಸಂಘದ ಅಧ್ಯಕ್ಷ, ಪುರುಷೋತ್ತಮ ಗೌಡ ನೇತೃತ್ವದ ನಿಯೋಗ ಸಲ್ಲಿಸಿದ ಮನವಿಗೆ, ಸಚಿವರು ಪ್ರತಿಕ್ರಿಯಿಸಿದರು. ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತೆಲಂಗಾಣಾ ರಾಜ್ಯಗಳ, 9 ಜಿಲ್ಲೆಗಳ 16 ಲಕ್ಷ ಎಕರೆ ಕೃಷಿ ಭೂಮಿ, ಕುಡಿವ ನೀರು ಹಾಗೂ ಕೈಗಾರಿಕೆಗಳಿಗೆ, ತುಂಗಭದ್ರಾ ಅಣೆಕಟ್ಟೆ ನೀರು ಪೂರೈಕೆಯಾಗುತ್ತಿದೆ.

<><><>

**ವನವಾಸಿ, ಬುಡಕಟ್ಟು ಸಮುದಾಯಗಳು ವಾಸಿಸುವ,** ಗ್ರಾಮಗಳಲ್ಲಿ ಶಿಕ್ಷಣ, ಮೂಲಸೌಕರ್ಯ, ಕೌಶಲಾಭಿವೃದ್ಧಿ, ಉದ್ಯಮಶೀಲತೆ, ಆರೋಗ್ಯ ಹಾಗೂ ಪೌಷ್ಟಿಕತೆ ಸುಧಾರಿಸುವ ನಿಟ್ಟಿನಲ್ಲಿ, ಆದಿ ಕರ್ಮಯೋಗಿ ಅಭಿಯಾನ, ದೇಶಾದ್ಯಂತ ಆಯೋಜಿತವಾಗಿದೆ. ಹೊಸ ದಿಲ್ಲಿಯಲ್ಲಿ, ಆದಿ ಕರ್ಮಯೋಗಿ ಅಭಿಯಾನದ, ರಾಷ್ಟ್ರೀಯ ಸಮಾವೇಶದಲ್ಲಿ, ಬುಡಕಟ್ಟು ಸಮುದಾಯಗಳ ಕಲ್ಯಾಣಕ್ಕಾಗಿ, ಗಣನೀಯ ಸೇವೆ ಸಲ್ಲಿಸಿದವರನ್ನು, ರಾಷ್ಟ್ರಪತಿ ದ್ರೌಪದಿ ಮುರ್ಮು ಸನ್ಮಾನಿಸಿದರು. ದೇಶದ ವಿವಿಧ ರಾಜ್ಯಗಳಿಂದ, ಆದಿ ಸಾಥಿ ಹಾಗೂ ಆದಿ ಸಹಯೋಗಿಗಳು ರಾಷ್ಟ್ರಪತಿ ಅವರಿಂದ ಸನ್ಮಾನಿತರಾದರು. ಚಿತ್ರದುರ್ಗ ಜಿಲ್ಲೆ, ಪರಿಶಿಷ್ಟ ವರ್ಗಗಳ ಅಭಿವೃದ್ಧಿ ಅಧಿಕಾರಿ, ದಿವಾಕರ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಪ್ರದೇಶ ಸಮಾಚಾರಕ್ಕಾಗಿ, ಆದಿ ಕರ್ಮಯೋಗಿ ಅಭಿಯಾನದ ಕುರಿತು, ಅವರು ಮಾಹಿತಿ ನೀಡಿದ್ದಾರೆ.

<><><>

**ತಾಲೂಕು ಮಟ್ಟದ, ಎಲ್ಲ ಸರ್ಕಾರಿ** ಆಸ್ಪತ್ರೆಗಳಲ್ಲಿ, ಸ್ತ್ರೀ ಆರೋಗ್ಯ, ಅರವಳಿಕೆ ಹಾಗೂ ಮಕ್ಕಳ ಆರೋಗ್ಯ ವೈದ್ಯರು, ಒಟ್ಟು ಮೂವರು ತ್ರಿವಳಿ ತಜ್ಞರನ್ನು ಖಾತ್ರಿ ಪಡಿಸಲು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಯೋಜಿಸಿದೆ ಎಂದು, ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲೂಕು ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದ ಸಚಿವರು, ತಾಲೂಕು ಆಸ್ಪತ್ರೆಗಳಲ್ಲಿ, ದಿನದ 24 ಗಂಟೆಯೂ, ತಜ್ಞ ವೈದ್ಯರ ಸೇವೆ ಶೀಘ್ರ ಲಭ್ಯವಾಗಲಿದೆ ಎಂದರು. ನೂರು ಕೋಟಿ ರೂಪಾಯಿ ವೆಚ್ಚದಲ್ಲಿ, ಇನ್ನೂರು ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆಯಾಗಿ, ಮೊಳಕಾಲ್ಮೂರು ತಾಲೂಕು ಆಸ್ಪತ್ರೆ, ಮೇಲ್ದರ್ಜೆಗೇರಲಿದೆ ಎಂದು ಸಚಿವ ದಿನೇಶ ಗುಂಡೂರಾವ ತಿಳಿಸಿದರು.

<><><>

**ಬೀದರ ಜಿಲ್ಲೆಯ,** ಅತಿ ವೃಷ್ಟಿ ಹಾಗೂ ನೆರೆ ಹಾನಿಯ ಪರಿಹಾರವಾಗಿ, 300 ಕೋಟಿ ರೂಪಾಯಿ, ಮುಂಬರುವ ಒಂದು ತಿಂಗಳೊಳಗೆ, ರೈತರ ಖಾತೆಗೆ ಜಮೆಯಾಗಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದ್ದಾರೆ. ಬೀದರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ವಿಪತ್ತು ನಿರ್ವಹಣಾ ಸಭೆ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ತಮ್ಮ ಮನವಿ ಮೇರೆಗೆ, ಮುಖ್ಯಮಂತ್ರಿಯವರು ಘೋಷಿಸಿದಂತೆ, ಪ್ರತಿ ಹೆಕ್ಟರ್ ಬೆಳೆ ಹಾನಿಗೆ, ರಾಜ್ಯ ಸರ್ಕಾರ ಹೆಚ್ಚುವರಿಯಾಗಿ, 8 ಸಾವಿರದ 500 ರೂಪಾಯಿ ರೈತರಿಗೆ ನೀಡಲಿದೆ ಎಂದರು. ರಾಷ್ಟ್ರೀಯ ಹಾಗೂ ರಾಜ್ಯ ನೈಸರ್ಗಿಕ ವಿಕೋಪ ಪರಿಹಾರ ನಿಧಿ ಯೋಜನೆ ಅಡಿ, 170 ಕೋಟಿ ರೂಪಾಯಿ ಪರಿಹಾರ, ಈಗಾಗಲೇ ರೈತರಿಗೆ ಪಾವತಿಸಲಾಗಿದೆ ಎಂದು ಸಚಿವ ಈಶ್ವರ

ಖಂಡ್ರೆ ನುಡಿದರು. ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಪಾಲ್ಗೊಂಡ ಸಚಿವರು, ಬೀದರ್ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ, ಕಳೆದ ಮೂರು ವರ್ಷಗಳಲ್ಲಿ, ಮಂಡಳಿ, ಸಾವಿರದ 500 ಕೋಟಿ ರೂಪಾಯಿ ನೀಡಿದೆ ಎಂದರು.

<><><>

**ತುಮಕೂರು, ರಾಯದುರ್ಗ ಹೊಸ** ರೈಲು ಮಾರ್ಗ ನಿರ್ಮಾಣ ಯೋಜನೆಯ ಭಾಗವಾದ, ದೊಡ್ಡಹಳ್ಳಿ–ಪಾವಗಡ–ಮಡಕಶಿರ ಮಧ್ಯದ, ಹೊಸ ರೈಲು ಮಾರ್ಗದ ಕಾಮಗಾರಿಯನ್ನು, ರೇಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಪರಿಶೀಲಿಸಿದರು. ಬಳಿಕ ಮಾತನಾಡಿದ ಸಚಿವರು, ದೊಡ್ಡಹಳ್ಳಿ ಮತ್ತು ಪಾವಗಡ ನಡುವಿನ, 16 ಕಿಲೋ ಮೀಟರ್ ಹೊಸ ರೈಲು ಮಾರ್ಗದ ಕಾಮಗಾರಿ ಪ್ರಗತಿಯಲ್ಲಿದೆ. ಜನವರಿ 2026 ರ ವೇಳೆಗೆ ಪೂರ್ಣಗೊಳ್ಳಲಿದೆ ಎಂದರು.

<><><>

**ಬೆಂಗಳೂರಿನ, ರಾಷ್ಟ್ರೀಯ ಮನೋ ಆರೋಗ್ಯ ಹಾಗೂ ನರ** ವಿಜ್ಞಾನಗಳ ಸಂಸ್ಥೆ – ನಿಮ್ಹಾನ್ಸ್, ನಾಲ್ಕನೇ ಆವೃತ್ತಿಯ, ಮಾನಸಿಕ ಸಮುದಾಯ ಆರೋಗ್ಯ ಮೇಳಕ್ಕೆ ಚಾಲನೆ ನೀಡಿದೆ. ಮಾನಸಿಕ ಆರೋಗ್ಯ ಮತ್ತು ಆತ್ಮಹತ್ಯೆ ತಡೆ ಬಗ್ಗೆ, ಸಮುದಾಯದಲ್ಲಿ ಜಾಗೃತಿ ಮೂಡಿಸುವ ಉದ್ದೇಶದೊಂದಿಗೆ, ಎರಡು ದಿನಗಳ ಕಾಲ, ಈ ಶಿಬಿರ ಆಯೋಜಿತವಾಗಿದೆ. ನಿಮ್ಹಾನ್ಸ್ ಅಧ್ಯಕ್ಷೆ ಡಾಕ್ಟರ್ ಪ್ರತಿಮಾ ಮೂರ್ತಿ, ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಾನಸಿಕ ಆರೋಗ್ಯ ಶಿಕ್ಷಣದಲ್ಲಿ ಸಮುದಾಯಗಳನ್ನು ತೊಡಗಿಸಿಕೊಳ್ಳುವುದರಿಂದ, ಅನೇಕ ಕೀಳರಿಮೆ, ಸಾಮಾಜಿಕ ಕಟ್ಟುಪಾಡುಗಳನ್ನು ನಿವಾರಿಸಬಹುದು ಎಂದರು. 84 ಸಾಮುದಾಯಿಕ ಸಂಘಟನೆಗಳು, 3 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು, ಆರೋಗ್ಯ ಸೇವಾ ಕ್ಷೇತ್ರದ ಪರಿಣಿತರು ಪಾಲ್ಗೊಂಡಿದ್ದಾರೆ.

<><><>

**ಅತ್ಯಂತ ಕಡಿಮೆ ಅವಧಿಯಲ್ಲಿ, ಹಿತಮಿತ ಪ್ರದೇಶದಲ್ಲಿ,** ವೈಜ್ಞಾನಿಕವಾಗಿ ಅರಣ್ಯ ಸದೃಷ ನೆಡುತೋಪು ಬೆಳೆಸುವ, ಜಪಾನಿ ತಜ್ಞ ಅಕಿರಾ ಮಿಯಾವಾಕಿ ಪ್ರತಿಪಾದಿಸಿದ, ಕಾನು ತೋಟ, ಆಕಾಶವಾಣಿ ಧಾರವಾಡ ಕೇಂದ್ರದ ಆವರಣದಲ್ಲಿ, ಹಸುರಿನಿಂದ ಕಂಗೊಳಿಸುತ್ತಿದೆ. ಪಶ್ಚಿಮಘಟ್ಟದ ಅಪರೂಪದ ಹಾಗೂ ವಿಶೇಷ ಪ್ರಭೇದದ ಗಿಡಗಳು ಸೇರಿದಂತೆ, ಸ್ಥಳೀಯ ಪ್ರಜಾತಿಯ ಹಣ್ಣು, ಹೂವು ಮತ್ತು ಚಿಟ್ಟೆ, ಪತಂಗ, ಹಕ್ಕಿಗಳನ್ನು ಆಕರ್ಷಿಸಲಿರುವ, ಅಲಂಕಾರಿಕ ಗಿಡಗಳನ್ನು ಮಿಯಾವಾಕಿ ನೆಡುತೋಪು ಹೊಂದಿದೆ. ಹುಬ್ಬಳ್ಳಿಯ, ಮೈಕ್ರೊ ಫಿನಿಶ್ ವಾಲ್ವ್ಸ್ ಪ್ರೈವೆಟ್ ಲಿಮಿಟೆಡ್, ತನ್ನ ಕಾರ್ಪೋರೆಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಅಡಿ, ರೂಪಿಸಿದ ಮಿಯಾವಾಕಿ ನೆಡುತೋಪನ್ನು, ವ್ಯವಸ್ಥಾಪಕ ನಿರ್ದೇಶಕ, ಮಹೇಂದ್ರ ವಿಕಾಂಶಿ ಉದ್ಘಾಟಿಸಿದರು. ಆಕಾಶವಾಣಿ ಧಾರವಾಡ ಕೇಂದ್ರದ, ತಾಂತ್ರಿಕ ಉಪ ಮಹಾ ನಿರ್ದೇಶಕ, ಅರುಣ ಪ್ರಭಾಕರ, ಕಾರ್ಯಕ್ರಮ ಮುಖ್ಯಸ್ಥ ಶರಣಬಸವ ಚೋಳಿನ, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಜಗದೀಶ ಸೇರಿದಂತೆ, ಅರಣ್ಯ ಇಲಾಖೆ ಅಧಿಕಾರಿಗಳು, ಆಕಾಶವಾಣಿ ಸಿಬ್ಬಂದಿ ಪಾಲ್ಗೊಂಡಿದ್ದರು. ಮಿಯಾವಾಕಿ ನೆಡುತೋಪಿನ ಕುರಿತು, ವಸುಂಧರಾ ಫೌಂಡೇಶನ್ ಅಧ್ಯಕ್ಷ ಮೇಘರಾಜ ಕೆರೂರ, ಮಾಹಿತಿ ನೀಡಿದ್ದಾರೆ.

<><><>

**ಮದ್ಯಪಾನ ಹಾಗೂ ಮಾದಕ** ವಸ್ತುಗಳ ಸೇವನೆಯಿಂದ, ಯುವಜನತೆ ದೂರವಿದ್ದು, ಭವಿಷ್ಯ ರೂಪಿಸಿಕೊಳ್ಳುವಂತೆ, ಮದ್ಯಪಾನ ಸಂಯಮ ಮಂಡಳಿ ರಾಜ್ಯಾಧ್ಯಕ್ಷ ಶರಣಪ್ಪ ಸಲಾದಪುರ, ಮನವಿ ಮಾಡಿದ್ದಾರೆ. ಕಲಬುರಗಿ ಜಿಲ್ಲೆ, ಅಫಜಲಪುರದಲ್ಲಿ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಆಯೋಜಿಸಿದ್ದ, ಸಾವಿರದ 9 ನೂರಾ 89ನೇ ಮದ್ಯ ವರ್ಜನ ಶಿಬಿರದ, ಸಮಾರೋಪದಲ್ಲಿ ಮಾತನಾಡಿದರು. ಮದ್ಯಪಾನ ಹಾಗೂ ಮಾದಕ ವ್ಯಸನ, ಇಡೀ ಕುಟುಂಬವನ್ನು ಹಾಳು ಮಾಡುತ್ತದೆ. ಅಂತಹ ವ್ಯಕ್ತಿ ಸಮಾಜಕ್ಕೂ ಭಾರವಾಗುತ್ತಾನೆ ಎಂದರು. ಒಟ್ಟು 40 ಜನ ಶಿಬಿರಾರ್ಥಿಗಳು, ಮದ್ಯ ವಿಮುಕ್ತಿ ಶಿಬಿರದ ಪ್ರಯೋಜನ ಪಡೆದಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಕೇಂದ್ರ ಪುರಸ್ಕೃತ ಜನಪರ ಯೋಜನೆಗಳ ಕಾಲಮಿತಿ ಅನುಷ್ಠಾನಕ್ಕೆ, ಆದ್ಯತೆ ನೀಡುವಂತೆ,** ಕೇಂದ್ರ ಹಣಕಾಸು ಖಾತೆ ಸಚಿವರ, ಸೂಚನೆ.

**ಕೇಂದ್ರದ, ಆದಿ ಕರ್ಮಯೋಗಿ ಅಭಿಯಾನದಡಿ,** ಚಿತ್ರದುರ್ಗ ಜಿಲ್ಲೆಯ, 87 ಗ್ರಾಮಗಳು ಆಯ್ಕೆ.

**ರಾಜ್ಯದ ಎಲ್ಲ ತಾಲೂಕು ಆಸ್ಪತ್ರೆಗಳಲ್ಲಿ, ದಿನದ** 24 ಗಂಟೆ ತ್ರಿವಳಿ ತಜ್ಞ ವೈದ್ಯರ ಲಭ್ಯತೆ ಖಾತ್ರಿಗೆ, ಆರೋಗ್ಯ ಇಲಾಖೆ ಯೋಜನೆ.

**ಆಕಾಶವಾಣಿ ಧಾರವಾಡ** ಕೇಂದ್ರದಲ್ಲಿ, ಒಂದು ಸಾವಿರ ವಿಶಿಷ್ಟ ಸಸ್ಯಗಳ, ಮಿಯಾವಾಕಿ ಕಾನು ತೋಟ, ಉದ್ಘಾಟನೆ.

<><><>